ಮಂಡಿಸುವಾಗಲೂ ಕೂಡ ಹಾಜರಿರುವುದಿಲ್ಲವೆಂದರೆ ಇದು ನಾಚಿಕೆಗೇಡಿನ ವಿಚಾರ.

ಅಧ್ಯಕ್ಷರು: ಸರಿಮಾಡಿಕೊಳ್ಳುತ್ತಾರೆ.

ಶ್ರೀ ಟಿ ಬಿ ಜಯಚಂದ್ರ: ಯಾರು ಬೇಕಾದರೂ ಮಂಡನೆ ಮಾಡಬಹುದು, ಆ ವಿಚಾರ ಬೇರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ವಿಧಾನಪರಿಷತ್ತಿನಲ್ಲಿ question hour ನಡೆಯುತ್ತಿದೆ. ಶ್ರೀ ಸುರೇಶ್ ಕುಮಾರ್‌ರವರ ಖಾತೆಗೆ ಸಂಬಂಧಿಸಿದ ಪ್ರಶ್ನೆಗಳು ಅಲ್ಲಿ ಇವೆ.

ಶ್ರೀ ಟಿ ಬಿ ಜಯಚಂದ್ರ: ಅಂಥ ಸಂದರ್ಭದಲ್ಲಿ ನೀವು ಮಂಡಿಸಿ. ಅದು ಬಿಟ್ಟು ಬೇರೆಯವರ ವಿಚಾರದಲ್ಲಿಯೂ ಕೂಡ ಮಾಡುವುದು ಸರಿಯಿಲ್ಲ. ಈಗ ಮಾನ್ಯ ಮಂತ್ರಿಯವರು ಕಾಗದಪತ್ರ ಮಂಡಿಸಿದರು. ಅವರು ಮಂಡಿಸಬೇಕಾದ ಕಾಗದ ಪತ್ರಗಳ ಬಗ್ಗೆ ಅವರಿಗೇ ಗೊತ್ತಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

I. ಶ್ರೀ ಬಿ ಎಸ್ ಯಡಿಯೂರಪ್ಪ (ಮುಖ್ಯಮಂತ್ರಿ) ಅವರ ಪರವಾಗಿ:–

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(7)ರ ಪ್ರಕರಣದ ಮೇರೆಗೆ:

1. ಶ್ರೀ ಎ.ಬಿ.ಇಬ್ರಾಯಿಂ ಕೆ.ಎ.ಎಸ್. ಇವರ ವಿರುದ್ಧದ ಲೋಕಾಯುಕ್ತ ವಿಚಾರಣೆಯ ಬಗ್ಗೆ ವಿವರಣಾತ್ಮಕ ಮತ್ತು ಲೋಕಾಯುಕ್ತರ ವಿಶೇಷ ವರದಿ.

ಭಾರತದ ಸಂವಿಧಾನದ ಅನುಚ್ಛೇದದ 323(2)ರ ಪ್ರಕರಣದ ಮೇರೆಗೆ:

2. ಕರ್ನಾಟಕ ಲೋಕ ಸೇವಾ ಆಯೋಗದ 2008–09ನೇ ಸಾಲಿನ ವಾರ್ಷಿಕ ವರದಿ. ಹಾಗೂ

2005ರ ಮಾಹಿತಿ ಹಕ್ಕು ಅಧಿನಿಯಮದ ಕಲಂ 25(4)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಮಾಹಿತಿ ಆಯೋಗದ 2007–08ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 47(5) ಪ್ರಕರಣದ ಮೇರೆಗೆ:

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಪ್ರಮಾಣೀಕೃತ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿಗಳ ಅಧಿನಿಯಮದ 619 ಕಲಂ (ಎ)ರ ಪ್ರಕರಣದ ಮೇರೆಗೆ:

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇದರ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

3. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ. ಹಾಗೂ

4. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

II. ಶ್ರೀ ವಿ ಎಸ್ ಅಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು) ಅವರ ಪರವಾಗಿ:–

1956ರ ಕಂಪನಿಗಳ ಅಧಿನಿಯಮದ ಕಲಂ 619 (ಎ)ರ ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ..

1952ರ ವಿಚಾರಣಾ ಆಯೋಗದ ಅಧಿನಿಯಮದ ಕಲಂ 3(4) ರ ಪ್ರಕರಣದ ಮೇರೆಗೆ: